ಏನಾದರೂ ಧ್ಯೇಯ ಕಂಣುಮುಂದೆ ಇಟ್ಟುಕೊಂಡು ರಾಜ್ಯರಥ ಸಾಗಿತು. ಮುಂದಿನ ಹತ್ತು ವರುಷದಲ್ಲಿ ರಾಜ್ಯರಥ ನಿಂತಲ್ಲಿಯೇ ನಿಂತು ಪ್ರಗತಿ ಕುಂಠಿತವಾಯಿತು. ನಿಂತ ನೀರಲ್ಲಿ ಕ್ರಿಮಿಗಳು ನಿರ್ಮಾಣವಾಗುವಂತೆ ವೈಯಕ್ತಿಕ ಸ್ವಾರ್ಥ, ವೈಯಕ್ತಿಕ ದ್ವೇಷಗಳ ಮುಂದೆ ದೇಶದ ವಿಚಾರ ಹಿಂದೆ ಬೀಳಹತ್ತಿತು. ಪ್ರಗತಿ ಪ್ರತಿಗಾಮಿ ಸ್ವರೂಪ ತಾಳಿತು. ಮುಂದಿನ ಐದು ವರ್ಷಗಳಲ್ಲಿಯಂತೂ ಇದೇನು ಸ್ವರಾಜ್ಯವೋ? ಸುರಾಜ್ಯವೋ ಸುರಾ ರಾಜ್ಯವೋ ಎಂದು ಬಹಿರಂಗವಾಗಿ ಚರ್ಚೆಸುವಮಟ್ಟಿಗೆ ನಮ್ಮ ಅಧೋಗತಿಯಾಯಿತು.

ಇದು ನನ್ನ ಸ್ವರಾಜ್ಯ !

ಸ್ವರಾಜ್ಯವು ಸುರಾಜ್ಯಕ್ಕಾಗಿ ಅವಶ್ಯವಿದ್ದ ಮೂಲಭೂತಸಂಗತಿಯೆಂದು ಲೋಕ ಮಾನ್ಯ ತಿಲಕರೂ, ಗಾಂಧೀಜಿಯವರೂ ಹೇಳುತ್ತ ಬಂದರು. ಸುರಾಜ್ಯವೆಂದರೆ ಒಳ್ಳೇ ರಾಜ್ಯ, ಕಲ್ಯಾಣರಾಜ್ಯ. ಸ್ವರಾಜ್ಯವೆಂದರೇ ಬ್ರಿಟಿಶರನ್ನು ಹೊರಗೆ ಹಾಕಿ ಆಡಳಿತೆಯನ್ನು ನಮ್ಮ ಜನರೇ ನಡೆಸುವದು ಎಂಬ ಸಂಕುಚಿತ ವಿಚಾರ ಅವರದಾಗಿದ್ದಿಲ್ಲ. ಹಾಗಾಗಿದ್ದರೆ ನಮ್ಮವರೇ ನಮ್ಮ ಜಾತಿಪಂಥದವರೇ ಆಗಿದ್ದ ದೇಶೀ ಸಂಸ್ಥಾನಗಳನ್ನು ವಿಲಯನ ಮಾಡುವ ಕಾರಣವೇ ಇದ್ದಿಲ್ಲ. ಆದರೆ ಅದು ಸ್ವರಾಜ್ಯವೆಂದರೆ ಜನರಿಗಾಗಿ ಜನರಿಂದ ಆರಿಸಲ್ಪಟ್ಟು ಜನರ ಕಲ್ಯಾಣದ ಸಲುವಾಗಿ ಆಡಳಿತೆ ನಡೆಸುವದು ಎಂಬ ಅರ್ಥವನ್ನು ಅವರು ಹೇಳಿದ್ದರು, ಜನರ ಕಲ್ಯಾಣವೆಂದರೇನು ಅವರ ಹೊಟ್ಟೆಬಟ್ಟೆ, ಆಸರೆ, ಆರೋಗ್ಯ ಅರಿವುಗಳ ವಿಚಾರ. ಅವುಗಳಪೂರೈಕೆಯ ಏರ್ಪಾಟು. ಜನಸಾಮಾನ್ಯರ ಬಡತನ ದೂರವಾಗಬೇಕು, ದುಡಿಯುವವರಿಗೆ ವ್ಯವಸ್ಥಿತ ಜೀವನ ಸಾಗಿಸುವಂತೆ ಅನುಕೂಲತೆ ಮತ್ತು ಆಸ್ಪದವಿರ ಬೇಕು, ಅವರ ಅಜ್ಞಾನ ದಾರಿದ್ರ್ಯ ಹೋಗಬೇಕು, ಅವರಲ್ಲಿ ನೀತಿ ಚಾರಿತ್ರ್ಯ ಸ್ವಾಭಿಮಾನ ಹುಟ್ಟಬೇಕು. ಅವರು ನಿರ್ವ್ಯಸನಿಗಳಾಗಬೇಕು, ಬಡವರ ಶ್ರೀಮಂತರ ಆದಾಯದಲ್ಲಿ ಬಹಳ ವ್ಯತ್ಯಾಸ ಇರಬಾರದು, ಎಲ್ಲರೂ ಜಾತಿ ನಿರ ಪೇಕ್ಷರಾಗಿ ಸ್ವತಂತ್ರತೆ ಸಮಾನತೆ ಬಂಧುತ್ವಗಳನ್ನು ನಿರಾತಂಕವಾಗಿ ಅನುಭೋಗಿಸಬೇಕು. ತನ್ನ ರಕ್ಷಣೆ ಮಾಡಿಕೊಳ್ಳುವ ಆತ್ಮವಿಶ್ವಾಸ ಸ್ವಾವಲಂಬನೆ ಇರಬೇಕು, ಇವೇಮುಂತಾದ ಕನಸುಗಳನ್ನು ನಾವೆಲ್ಲ ಹೋರಾಡುವಾಗ ಕಂಡಿದುರು ಕಟ್ಟಿಕೊಂಡಿದ್ದೆವು. ಆದರೆ ಆ ಕನಸು ಕನಸಾಗಿಯೇ ಉಳಿಯಿತು. ಸ್ವಾತಂತ್ರ್ಯ ಬಂದು ಕಾಲು ಶತಮಾನ ವಾದರೂ ಜನತೆಯ ಸ್ಥಿತಿಗತಿ ಯಾವ ರೀತಿಯವಾಗಿ ಉಳಿದಿದೆ ಎಂಬುದನ್ನು ನೋಡಿದರೆ ಇದ ಕ್ಕಾಗಿಯೇ ನಾವು ಹೋರಾಡಿದೆವೋ ? ಹುತಾತ್ಮರು ಬಲಿದಾನ ಮಾಡಿದರೇ ? ಎಂದು ಮನಸ್ಸು ವ್ಯಾಕುಲಗೊಳ್ಳುತ್ತದೆ !

ಶ್ರೀ ಸಾಮಾನ್ಯನ ಸ್ಥಿತಿಯಲ್ಲಿ ಯಾವ ವಿಶೇಷ ಬದಲಾವಣೆಯೂ ಆಗಿಲ್ಲ. ಅವನು ಇದ್ದಲ್ಲಿಯೇ ಇದ್ದಾನೆ. ಬಾಯಿಯಿಂದ ಸಮತಾವಾದ, ಗರೀಬಿ ಹಟಾವೋ ಘೋಷಣೆ ನಡೆದಿವೆ. ಘೋಷಣೆಯಿಂದ ಯಾರ ಹೊಟ್ಟೆಯೂ ತುಂಬಿಲ್ಲ, ತುಂಬುವದಿಲ್ಲ. ಶ್ರೀ ಸಾಮಾನ್ಯನ ಆದಾಯ ಮತ್ತು ಭಾರತದ ಪ್ರಥಮ ನಾಗರಿಕನ [ರಾಷ್ಟ್ರಪತಿಯ] ಆದಾಯದಲ್ಲಿ ೫೦೦ ಪಟ್ಟು ಅಂತರವಿದೆ ಈ ನಮ್ಮ ಸ್ವರಾಜ್ಯದಲ್ಲಿ !

ಮಾನವನ ಬುದ್ಧಿ ಹಾನಿ, ದ್ರವ್ಯಹಾನಿ, ಆತ್ಮಹಾನಿ, ಮಾಡಿ ಮಾನವನನು ದಾನವರನ್ನಾಗಿ ಮಾಡುವ ಸಿಂದಿ ಸೆರೆ ಮುಂತಾದ ದುರ್ವ್ಯಸನಗಳಿಗೆ ಹೆಚ್ಚೆಚ್ಚು ಪ್ರೋತ್ಸಾಹ ಸರಕಾರಗಳೇ ಕೊಡುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ವಿದ್ಯಾರ್ಥಿಗಳು ತರುಣರು ಹಿಂದೆಂದೂ ಕಾಣದಷ್ಟು ಪ್ರಮಾಣದಲ್ಲಿ ಈ ದುರ್ವ್ಯಸನಗಳಿಗೆ ಭರದಿಂದ ಬಲಿಬೀಳುತ್ತ ಭಾರತದ ಭವಿತವ್ಯವನ್ನೇ ಅಂಧಃಕಾರದಲ್ಲಿ ನೂಕುತ್ತಿರುವರು ಈ ನಮ್ಮ ಸ್ವರಾಜ್ಯದಲ್ಲಿ !

ಲಾಟ್ರಿ ಮುಂತಾದವುಗಳನ್ನು ಸುರು ಮಾಡಿ ಸರಕಾರಗಳೇ ಜೂಜಾಟಕ್ಕೆ ಪ್ರೋತ್ಸಾಹ ಕೊಟ್ಟು ಪುರುಷಾರ್ಥ ನಾಶಕ್ಕೆ ಮುಂದಾಗುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ನೂರಕ್ಕೆ ಮುನ್ನೂರು ರೂಪಾಯಿಯ ಬಡ್ಡಿಯ ಸಾಲದಲ್ಲಿ ಮುಳುಗಿ ಮುಳುಗಿ ಗ್ರಾಮೀಣ ಜನತೆ ಸಾಯುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ಕುಟುಂಬ ಯೋಜನೆಯ ನೆವದಲ್ಲಿ ಪಾವಿತ್ರ್ಯನಾಶ, ಚಾರಿತ್ರ್ಯನಾಶ, ಸಂಸ್ಕೃತಿ ನಾಶಗಳು ನಡೆದಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ಹವೆ, ನೀರು, ಗಾಳಿಯಂತೆ ಸಾರ್ವತ್ರಿಕವಾಗಿ ಲಂಚಗುಳಿತನದ ಸಾಮ್ರಾಜ್ಯ ಬೆಳೆಯುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ಊರೂರಿಗೆ ಹೈಸ್ಕೂಲ ಕಾಲೇಜುಗಳಾಗಿದ್ದರೂ ವಿದ್ಯಾರ್ಥಿಗಳ ಬುದ್ಧಿ ಮಟ್ಟ ನಾಚಿಕೆಪಡುವಷ್ಟು ಕೆಳಗೆ ಇಳಿಯುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ಆಹಾರಧಾನ್ಯದ ಸಲುವಾಗಿ ಇನ್ನೂ ಪರದೇಶಗಳಿಂದ ಭಿಕ್ಷೆ ಬೇಡುವದು ತಪ್ಪದಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ಜನತೆಯ ಪ್ರತಿನಿಧಿಗಳೆಂದು ಆರಿಸಿ ಹೋಗುವ ಮಹನೀಯರು ಚುನಾವಣೆಯಲ್ಲಿ ಲಕ್ಷಾವಧಿ ರೂಪಾಯಿಯ ಹುಚ್ಚು ಹೊಳೆ ಹರಿಸಿಯೂ ಖೊಟ್ಟಿಲೆಕ್ಕ ಒಪ್ಪಿಸುತ್ತಿ

ರುವದು ಈ ನಮ್ಮ ಸ್ವರಾಜ್ಯದಲ್ಲಿ !

ಅಧಿಕಾರ, ದುಡ್ಡು, ಲಂಚಕ್ಕಾಗಿ ನಾಯಿಗಳಂತೆ ಕಚ್ಚಾಡಿ ದಿನಕ್ಕೊಂದು ರೀತಿ ಪಕ್ಷಾಂತರದ ಪಿಡುಗಿಗೆ ಪ್ರತಿನಿಧಿಗಳು ಬಲಿಯಾಗುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ

ಜಾತ್ಯಾತೀತತೆಯನ್ನು ಗಂಟಲು ಹರಿಯುವಂತೆ ಕೂಗುತ್ತ ಹಿಂದುಗಳಿಗೊಂದು ಮುಸಲ್ಮಾನರಿಗೊಂದು ಹೀಗೆ ಬೇರೆ ಬೇರೆ ಕಾಯಿದೆಗಳನ್ನು ಮಾಡುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ. ರಾಷ್ಟ್ರೀಯ ಐಕ್ಯತೆಯ ಮಾತು ಹೆಜ್ಜೆ ಹೆಜ್ಜೆಗೂ ಹೇಳುತ್ತ ಚಿಕ್ಕ ಬಾಲಕರೂ ಪ್ರಾಥಮಿಕ ಶಾಲೆಗಳಲ್ಲಿ ಕಲಿಯವಾಗ ಪರಸ್ಪರರು ಎಂದೂ ತಪ್ಪಿಸಹ ಕೂಡದಂತೆ ಒಂದು ಕೋಮಿನ ವಿದ್ಯಾರ್ಥಿಗಳಿಗೆ ರವಿವಾರ ಸೂಟಿ ಕೊಟ್ಟು ಇನ್ನೊಂದು ಕೋಮಿನ ವಿದ್ಯಾರ್ಥಿಗಳಿಗೆ ಶುಕ್ರವಾರ ಸೂಟಿಕೊಟ್ಟು ರಾಷ್ಟ್ರೀಯ ಐಕ್ಯತೆಗೆ ಕೊಡಲಿ ಪೆಟ್ಟು ಸರಕಾರವೇ ಹಾಕುತ್ತಿರುವದು ನಮ್ಮ ಈ ಸ್ವರಾಜ್ಯದಲ್ಲಿ !

ಆದಷ್ಟು ಹೆಚ್ಚು ದುಡ್ಡು ಆದಷ್ಟು ಕಡಿಮೆದುಡಿತ ಧ್ಯೇಯವೆಂದು ಎಲ್ಲರೂ ತಿಳಿದು ನಡೆಯುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ವಿಕೇಂದ್ರೀಕರಣ, ಬಡತನ ನಿವಾರಣೆಯ ಘೋಷಣೆ ಮಾಡುತ್ತ ಕೇಂದ್ರೀಕರಣ ಮತ್ತು ಬಂಡವಲಶಾಹಿಗೆ ಉತ್ತೇಜನ ದೊರೆಯುತ್ತಿರುವ ಈ ನಮ್ಮ ಸ್ವರಾಜ್ಯದಲ್ಲಿ !

ಕಳ್ಳಪೇಟೆಯ ವ್ಯವಹಾರ ಸಾಗಿಸುವದು ರಾಷ್ಟ್ರದ್ರೋಹವಾಗಿರುವದರಿಂದ ಅವರಿಂದ ಅವರಿಗೆ ಘಟಕೆ ಹೊಡೆಯ ಬೇಕೆಂದು ಹಲ್ಲುಕಡಿಯುತ್ತ ಹೇಳಿ ಅಂಥ ಒಬ್ಬ ನನ್ನಾದರೂ ಈ ಕಾಲು ಶತಮಾನದಲ್ಲಿ ಶೋಧಿಸದಿರುವದು ಈ ನಮ್ಮ ಸ್ವರಾಜ್ಯದಲ್ಲಿ

ನ್ಯಾಯಾಂಗವೇ ಭಾರತೀಯ ಘಟನೆಯಲ್ಲಿ ಸರ್ವೋಚ್ಚ ತತ್ವವೆಂದು ಸಾರಿ ನ್ಯಾಯ್ಯಾಂಗವನ್ನು ಕಾರ್ಯಾಂಗದ ತೊತ್ತನ್ನಾಗಿ ಮಾಡುತ್ತಿರುವದು ನಮ್ಮ ಈ ಸ್ವರಾಜ್ಯದಲ್ಲಿ !

ಭಾರತೀಯ ನೀತಿ ಭಾರತೀಯ ಸಂಸ್ಕೃತಿಗಳಿಗೆ ತಿಲಾಂಜಲಿ ಕೊಟ್ಟು ಪರಕೀಯರ ಹುಚ್ಚು ಅನುಕರಣ ಮಾಡುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ಮೋಟಾರ ಬಸ್ಸುಗಳಲ್ಲಿ ರೇಲ್ವೆಡಬ್ಬಿಗಳಲ್ಲಿ ಹೇಗೆ ಹತ್ತಬೇಕೆಂಬ ತೀರ ಸಣ ಮಾತೂ ಇನ್ನೂ ವರೆಗೆ ತಿಳಿಯಲಿಲ್ಲ ನಮ್ಮ ಈ ಸ್ವರಾಜ್ಯದಲ್ಲಿ !

ಸರ್ವಾಧಿಕಾರಿತ್ವದ ಕಡೆಗೆ ದೇಶ ರಭಸದಿಂದ ನುಗ್ಗುತ್ತಿದ್ದರೂ ಅದರ ವಿರುದ್ಧ ಚಕಾರ ಶಬ್ದವನ್ನೂ ತಗೆಯದೆ ಬೌದ್ಧಿಕ ಗುಲಾಮಗಿರಿಯಲ್ಲಿ ಹೊರಳಾಡುತ್ತಿರುವದು

ಈ ರೀತಿ ಸ್ವಾಭಿಮಾನ ಶೂನ್ಯತೆಯಿಂದ ಚಿತ್ತ ಲಹರಿಗೆ ಅನುಸರಿಸಿ ಆಡಳಿತೆ ಸಾಗಿರುವಾಗ ಜನತೆಯಾದರೂ ಜಾಗೃತವಾಗಿದೆಯೇ ? ಅದೂ ಇಲ್ಲ. ಐದು ವರುಷ ಕ್ಕೊಮ್ಮೆ ಚುನಾವಣೆ ಬಂದಾಗ ದುಡ್ಡುತಕ್ಕೊಂಡು, ಜಾತೀಯತೆಗೆ ಮನಸೋತು ಯಾರಿಗೆ ಬೇಕಾದವರಿಗೆ ಮತಹಾಕಿ ತಮ್ಮ ಕಾಲ ಮೇಲೆ ತಾವೇ ಕಲ್ಲು ಹಾಕಿಕೊಂಡು ಮುಂದಿನ ಐದು ವರುಷದವರೆಗೆ ಅತ್ತ ಇಣಿಕಿ ಸಹ ನೋಡದಂತೆ ನಮ್ಮ ಮತದಾರರು ಹೊಣೆಗೆಟ್ಟು ಹೋಗಿದ್ದಾರೆ. ಪ್ರತಿಶತ ಐವತ್ತರೆಷ್ಟು ಅಂದರೆ ಸರಿ ಅರ್ಧದಷ್ಟು ಮತದಾರರು ಮತದಾನಕ್ಕೆ ಹೋಗುವ ಶ್ರಮವನ್ನೂ ಅದೂ ಐದು ವರುಷದಲ್ಲಿ ಒಮ್ಮೆ ಸಹ ತಕ್ಕೊಳ್ಳಲು ಸಿದ್ಧರಿಲ್ಲದವರಾಗಿದ್ದಾರೆ.

ಕಾರ್ಯಕರ್ತರೆಂಬುವರು ಸ್ವಾರ್ಥಸಾಧನೆಯಲ್ಲಿ ವಿಕ್ರಮ ಸಾಧಿಸುತ್ತಿದ್ದಾರೆ. ಆದರ್ಶಗಳೆಲ್ಲ ಹಾಳಾಗಿ ಹೋಗಿವೆ. ವೈಚಾರಿಕ ದಾಸ್ಯದಲ್ಲಿ ಹಿಂದೆ ಪರಕೀಯ ರಾಜ ವಿದ್ದಾಗಿನಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮುಳುಗಿಹೋಗಿದ್ದಾರೆ.

ಕೆಲರಸ್ತೆಗಳನ್ನು ಟಾರರೋಡ ಮಾಡಿ, ಹೈಸ್ಕೂಲ ಕಾಲೇಜಗಳ ಕಟ್ಟಡ ಕಟ್ಟಿ, ಆಫೀಸರರ ಸಂಖ್ಯೆ ಹೆಚ್ಚಿಸಿದ ಮಾತ್ರಕ್ಕೆ ದೇಶದ ಅಭಿವೃದ್ಧಿ ಸಾಧಿಸಿದಂತಾಗದು. ಮೂಲಭೂತ ಸಮಸ್ಯೆಗಳ ಪರಿಹಾರವಾಗದೆ ಕೇವಲ ಮಲಮುಪಟ್ಟಿ ಬಡಿಯುವದರಿಂದ ಉನ್ನತಿಯನ್ನು ಸಾಧಿಸಲಾಗದು.

೨೫ ವರುಷಗಳ ಈ ದೀರ್ಘ ಕಾಲಾವಧಿಯಲ್ಲಿ ನಾವು ಸಾಧಿಸಿದ್ದೇನು ಎಂಬದನ್ನು ಕಾರ್ಯಕರ್ತರು ಅಭ್ಯಾಸಮಾಡಿ ಈಗಲಾದರೂ ಕಾರ್ಯಪ್ರವೃತ್ತರಾದದ್ದಾದರೆ ನಾವೆಲ್ಲ ಸ್ವರಾಜ್ಯಕ್ಕಾಗಿ, ಸುರಾಜ್ಯಕ್ಕಾಗಿ ಕಷ್ಟಪಟ್ಟದ್ದು ಸಾರ್ಥಕವಾದೀತು.

ಸ್ವರಾಜ್ಯವು ಸುರಾಜ್ಯವಾಗಲಿ ಸುರಾರಾಜ್ಯವಾಗುವದು ಬೇಡ !

ಬ್ರಿಟಿಶರ ಮಾನವೀಯತೆ !

ಬ್ರಿಟಿಶರು ವ್ಯಾಪಾರದ ಆಶೆಯಿಂದ ಈಸ್ಟ ಇಂಡಿಯಾ ಕಂಪನಿಯೆಂಬ ವ್ಯಾಪಾರಿ ಸಂಸ್ಥೆ ಸ್ಥಾಪಿಸಿ ಇಲ್ಲಿಗೆ ಬಂದರು. ನಮ್ಮ ದಡ್ಡತನ, ಒಳಜಗಳ, ವಿಕರಾಷ್ಟ್ರೀಯತೆಯ ಅಭಾವ ಮುಂತಾದವುಗಳ ಲಾಭ ಪಡೆದು ೧೭೫೭ ರಲ್ಲಿ ಪ್ರಥಮವಾಗಿ ಅವರು ಬಂಗಾ